


ಮೇಷ್ಟ್ರೇ... ನನ್ನ ಮಗ ಬರೀ ಅಪ್ಪ... ಅಪ್ಪ ಅಂತಾನೆ...!ಡ್ಯಾಡಿ.. ಮಮ್ಮಿ ಅನ್ನೊದೇ ಇಲ್ಲಾ.... ಸ್ವಲ್ಪ ಸರಿಯಾಗಿ ಪಾಠ ಮಾಡ್ರೀ...!

ಬದುವಿನ ಮೇಲೆ ಮೊಬೈಲ್ ಇಟ್ಟು ದೂರದಿಂದ ಜೋರಾಗಿ ಬೈಕಿನ ಮೇಲೆ ಬಂದು ಜಗ್ರನೆ ನಿಲ್ಲಿಸುವ ವಿಡಿಯೊ ಮಾಡಲು ಹೋಗಿ ಬ್ಯಾಲೆನ್ಸ್ ಸಿಗದೆ ಬದುವನ್ನು ಹಾರಿ ಗಾಳಿಯಲ್ಲಿ ಸುತ್ತಿ ಬಿದ್ದುಬಿಟ್ಟ. ಅಯ್ಯಯ್ಯಮ್ಮಾ ಎಂಬ ಸದ್ದಿಗೆ ಅಕ್ಕಪಕ್ಕ ಕೆಲಸ ಮಾಡುತ್ತಿದ್ದವರು ಓಡಿಬಂದರು. ಬೈಕೊಂದು ಕಡೆ ಇವನೊಂದು ಕಡೆ ಬಿದ್ದಿದ್ದರು. ಎತ್ತಿ ನಿಲ್ಲಿಸಿದರೆ ಹಾಗೆಯೇ ಕುಸಿದು ಬೀಳುತ್ತಿದ್ದ. ತುಮಕೂರಿನ ದೊಡ್ಡಾಸ್ಪತ್ರೆಗೆ ಸಾಗಿಸಿದರು.

ಬಿದ್ದ ರಭಸಕ್ಕೆ ಬೆನ್ನು ಮೂಳೆಗೆ ಪೆಟ್ಟು ಬಿದ್ದಿತ್ತು. ಸತತ ಮೂರು ತಿಂಗಳು ಆಸ್ಪತ್ರೆ ವಾಸ. ಪದ್ದಮ್ಮ ಜೊತೆಗೇ ಇದ್ದಳು. ಎರಡೆರಡು ಆಪರೇಷನ್ ಮಾಡಿಸಿದರು. ಜೀವ ಉಳಿಯಿತು. ಆದರೆ ಸೊಂಟದಿಂದ ಕೆಳಭಾಗ ಅಪ್ಪೂಟ ನಿಷ್ಕ್ರಿಯ.

ಮನೆಗೆ ಬಂದರು. ಆಸ್ಪತ್ರೆಯಲ್ಲಿ ನರ್ಸುಗಳು ಮಾಡುತ್ತಿದ್ದ ಕೆಲಸಗಳೆಲ್ಲಾ ಇಲ್ಲಿ ಪದ್ದಮ್ಮನ ಹೆಗಲೇರಿದವು. ಆಕೆಯೂ ನಿಗಾವಹಿಸಿ ಮಾಡುತ್ತಿದ್ದಳು. ಎರಡು ಮೂರು ತಿಂಗಳು ಹಾಗೇ ನಡೆಯಿತು. ಈ ನಡುವೆ ಮೂರ್ತಪ್ಪ ಸದಾ ಹಸಿವು ಎನ್ನತೊಡಗಿದ. ಮೂರೊತ್ತೂ ಊಟ ಬೇಕೆಂದು ಚಡಪಡಿಸುತ್ತಿದ್ದ. ಹಗಲೊತ್ತು ಊಟ ಕೊಡುವುದೇನೂ ಸಮಸ್ಯೆ ಆಗುತ್ತಿರಲಿಲ್ಲ. ಮನೆಯಲ್ಲಿದ್ದ ಇತರರು ಮಾಡುತ್ತಿದ್ದರು, ಪದ್ದಮ್ಮ ಬಡಿಸುತ್ತಿದ್ದಳು. ಆದರೆ ಆತನ ಕಕ್ಕಸ್ಸು ಮಾಡಿಸುವುದು, ಸ್ವಚ್ಛಗೊಳಿಸುವುದು ಪದ್ದಮ್ಮನೇ ಮಾಡಬೇಕಿತ್ತು.



ಆದರೆ ರಾತ್ರಿ ಹೊತ್ತೂ ಸೈತ ನಿದ್ದೆ ಮಾಡದೆ ತಿನ್ನಲು ಕೇಳಿದಾಗ ಪದ್ದಮ್ಮನೇ ಅಡುಗೆಯನ್ನೂ ಮಾಡಬೇಕಾಯಿತು. ಜೊತೆಗೆ ಔಷಧಿ ಕೊಡುವುದು, ಪಾತ್ರೆ ತೊಳೆಯುವುದು, ಮೈ ಒರೆಸುವುದು, ಬಟ್ಟೆ ಬದಲಾಯಿಸುವುದು, ಮನೆ ಅಚ್ಚುಕಟ್ಟು ಮಾಡುವುದು... ಹೀಗೆ ಆಕೆಗೆ ಕೆಲಸಗಳ ಸರಮಾಲೆಯೇ ಬಂದೆರಗಿದವು. ಇವನ ಆರ್ಭಟ, ಮೂತ್ರ, ಕಕ್ಕಸ್ಸಿನ ವಾಸನೆ ತಡೆಯಲಾರದೆ ಅಣ್ಣತಮ್ಮದಿರು ಸೇರಿ ತುಸು ದೂರದಲ್ಲಿದ್ದ ಹಳೆಯ ಮನೆಗೆ ಇವರನ್ನು ಸಾಗಿಸಿಬಿಟ್ಟರು.

***

ಸಂಸ್ಕಾರ ಮಾಡಿಸುವ ಐನೋರು ಬಂದರು. ದಫನಿಗೆ ಬೇಕಾದ ಕಲ್ಲುಪ್ಪು, ವಿಭೂತಿ ಉಂಡೆಗಳು, ಕಳ್ಳೆಪುರಿ, ಚಿಲ್ಲರೆ ಕಾಸು, ಹೊಸಾ ಬಟ್ಟೆ, ಕೆಂಪು ವಸ್ತ್ರ ಮುಂತಾದ ಸಕಲೆಂಟು ವಸ್ತುಗಳೂ ಬಂದವು. ಹೆಣಕ್ಕೆ ಸ್ನಾನ ಮಾಡಿಸುವ ತಯಾರಿ ಸುರುವಾಯಿತು. ಎಷ್ಟು ಪ್ರಯತ್ನಿಸಿದರೂ ತೆರೆದಿದ್ದ ಆತನ ಕಣ್ಣುಗಳನ್ನು ಮುಚ್ಚಲು ಆಗಿರಲಿಲ್ಲ. ಅವು ತನ್ನನ್ನು ಎತ್ತಿ ನಿಲ್ಲಿಸುವವರನ್ನು, ತೊಟ್ಟಿದ್ದ ಬಟ್ಟೆ ಕಳಚುವವರನ್ನು, ನೀರು ಸುರಿಯುವವರನ್ನು ಹಾಗೇ ನೋಡುತ್ತಿದ್ದವು, ದೊಡ್ಡ ಗಾತ್ರದ ಬಡ್ಡಗಣ್ಣುಗಳು. ನೀರು ಸುರುವಲು ಬಂದ ಕುಟುಂಬದ ಚಿಕ್ಕ ಹುಡುಗೊಂದು ಕಿಟಾರನೆ ಕಿರುಚಿ ಚೆಂಬು ದೂರ ಎಸೆದು ಓಡಿಬಿಟ್ಟಿತು. ದೊಡ್ಡವರೂ ಸೈತ ಹಿಂಬದಿಯಿಂದ ಹೀಗೆ ನೀರು ಹಾಕಿ ಹಾಗೆ ಹೋಗಿಬಿಟ್ಟರು.

ಬದುಕಿದ್ದವರು ಬಿರುಗಣ್ಣು ಬಿಟ್ಟು ನೋಡಿದರೆ ಯಾರೂ ಕೇರು ಮಾಡುತ್ತಿರಲಿಲ್ಲ. ಆದರೆ ಹೆಣದ ನೋಟ ಎಲ್ಲರಲ್ಲೂ ಭಯ ತರಿಸಿತ್ತು. ಮುಚ್ಚಿದ ಕಣ್ಣುಗಳ ಹೆಣಗಳನ್ನೇ ನೋಡಿದ್ದವರಿಗೆ ಇದು ಏನೋ ಅನಿಷ್ಟ ಅನಿಸುತ್ತಿತ್ತು. ಬೇಗಬೇಗ ಸ್ನಾನದ ಶಾಸ್ತ್ರ ಮುಗಿಸಿ, ಹೊಸಾ ಬಟ್ಟೆಗಳನ್ನು ಹಾಕಿ ಮಲಗಿಸಿಬಿಟ್ಟರು. ಮಲಗಿದಾಗ ಹೆಣದ ಕಣ್ಣುಗಳು ಸೂರು ನೋಡುತ್ತಿದ್ದರಿಂದ ಹೆಚ್ಚು ಭಯ ಅನಿಸುತ್ತಿರಲಿಲ್ಲ. ಆದರೂ ನೋಡಲು ಬರುತ್ತಿದ್ದವರು ಕಾಲಿಗೆ ಸಣ ಮಾಡಿ ಮುಖದತ್ತ ಬರುತ್ತಲೇ ಸಣ್ಣಗೆ ಹೆದರಿ ದೂರ ಸರಿಯುತ್ತಿದ್ದರು. ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡ ಐನೋರು 'ಇನ್ನೂ ಈ ಭೂಮಿ ಮೇಲೆ ಆಸೆ ತೀರಿಲ್ಲ ಮೂರ್ತಪ್ಪನಿಗೆ' ಎನ್ನುತ್ತಾ ಕೆಂಪು ವಸ್ತ್ರವನ್ನು ಮಡಿಚಿ ಕಣ್ಣುಗಳ ಮೇಲೆ ಇಟ್ಟರು.

ಸೂರ್ಯ ನೆತ್ತಿಯ ಮೇಲೆ ಬಂದು ಇನ್ನೇನು ವಾಲತೊಡಗಿದ. ಹೆಣವನ್ನು ಚಟ್ಟದ ಮೇಲೆ ಇಟ್ಟು ಅನಾಮತ್ತಾಗಿ ಎತ್ತಿಕೊಂಡು ಹೊರಟರು. 'ಹರಾ ನಮಹ್ ಪಾರ್ವತಿ ಪತಯೇ ಹರ ಹರ ಮಹದೇವ' ಎನ್ನುತ್ತಾ ಗುಂಪು ಹಿಂಬಾಲಿಸಿತು. ಸಾವಿನ ಮನೆಗೆ ಬಂದು ಹೆಣದ ಮೇಲೆ ಹಿಡಿ ಮಣ್ಣು ಹಾಕದಿದ್ದರೆ ಒಳ್ಳೆಯದಲ್ಲ ಎಂದು ಭಾವಿಸಿ ಪದ್ದಮ್ಮನ ಮನೆಯವರೂ ಹೊರಟರು.

ಪದ್ದಮ್ಮನನ್ನು ಯಾರೂ ಎಬ್ಬಿಸಲಿಲ್ಲ. ಮಲಗೇ ಇದ್ದಳು. ಒಬ್ಬಳೇ.

***

ಮೂರ್ತಪ್ಪ ಹಗಲು ರಾತ್ರಿ ಹೆಚ್ಚೆಂದರೆ ಒಂದೆರಡು ಗಂಟೆಯಷ್ಟೇ ನಿದ್ದೆ ಮಾಡುತ್ತಿದ್ದುದು. ಆ ಸಮಯದಲ್ಲಿ ಪದ್ದಮ್ಮ ಎಲ್ಲಾ ಕೆಲಸ ಮಾಡಿಕೊಳ್ಳಬೇಕಿತ್ತು. ಹೀಗಾಗಿ ಆಕೆಗೆ ಸುತ್ರಾಂ ನಿದ್ದೆ ಇಲ್ಲದಂತಾಯಿತು. ಆಕೆ ಕುಂತಲ್ಲೇ ತೂಕಡಿಸಿದರೆ ಮೂರ್ತಪ್ಪನ ಕೂಗಾಟ ಎಚ್ಚರಿಸುತ್ತಿತ್ತು. ಅಮ್ಮ ಬಂದು ಒಂದು ವಾರ ಇದ್ದು ಹೋದಳು. ಇದ್ದಷ್ಟು ದಿನ ಮಗಳನ್ನು ನೋಡಿ ನಿಟ್ಟುಸಿರು ಬಿಡುವುದೇ ಆಕೆಯ ಕೆಲಸವಾಗಿತ್ತು.

ಹಲವು ತಿಂಗಳು ಈ ಜಂಜಾಟದಲ್ಲೇ ಕಳೆದವು. ಒಮ್ಮೆ ಮೂರ್ತಪ್ಪ ಊಟ ಬೇಕು ಊಟ ಬೇಕು ಅನ್ನುತ್ತಿದ್ದಾನೆ. ಆತನ ಅಣ್ಣತಮ್ಮಂದಿರು ಹಾಗೂ ಅವರ ಮನೆಗೆ ಬಂದಿದ್ದ ಕೆಲವು ನೆಂಟರು ಬಂದು ನೋಡಿದರೆ ಪದ್ದಮ್ಮ ನಿದ್ರಿಸುತ್ತಿದ್ದಾಳೆ. ಗದರಿಸಿ ಎಬ್ಬಿಸಿದರು. ಗಂಡನನ್ನು ನೋಡಿಕೊಳ್ಳುವುದಕ್ಕಿಂತ ಬೇರೆ ಏನು ಕೆಲಸವಿದೆ ನಿನಗೆ ಹಾಗೆ ಹೀಗೆ ಅಂತ ಬೈಗುಳ ಬೇರೆ.

ಅಂದಿನಿಂದ ಮೂರ್ತಪ್ಪ ಪದ್ದಮ್ಮನನ್ನು ಹೀನಾಯವಾಗಿ ಬೈಯಲು ಶುರು ಮಾಡಿದ. ವಿನಾಕಾರಣ ಜೋರು ಮಾತು. ತಟ್ಟೆಯನ್ನು ಕಿತ್ತೆಸೆಯುವುದು, ಕುಂತಲ್ಲಿಂದಲೇ ಹೊಡೆಯಲು ಹೋಗುವುದು ಹೀಗೆ ಅವನ ಆರ್ಭಟ ನಡೆಯುತ್ತಿತ್ತು. ಒಂದು ದಿನ, ಡಬರಿ ತುಂಬಾ ಕಲಸಿದ್ದ ಚಿತ್ರಾನ್ನ ಕೊಟ್ಟಿದ್ದಳು. ಅವಳಿಗೋ ನಿದ್ದೆ ಇಲ್ಲದೆ ತಲೆ ನೋಯುತ್ತಿತ್ತು. ಹಸಿವು ಬೇರೆ. ಒಂದು ಹಿಡಿಯಷ್ಟು ಅನ್ನ ಉಳಿದಿತ್ತು. ಕಲಸಿ ತಿನ್ನಲು ಕುಂತರೆ ಮತ್ತೆ ವರಾತ ಶುರು.

'ಅನ್ನ ಕೊಡೇ'

'ಖಾಲಿ ಆಗಿದೆ, ಅರ್ಧ ಗಂಟೆ ಇರಿ ಬಿಸಿ ಆಗುತ್ತೆ'

'ಡಬರೀಲಿ ಅನ್ನ ಐತಲ್ಲ, ಕೊಡು ಚಿನಾಲಿ ಮುಂಡೆ'

'ನಾನೂ ರಾತ್ರಿಯಿಂದ ಏನು ತಿಂದಿಲ್ಲ, ಹಸಿವಾಗಿದೆ. ನಿಮಗೆ ಬೇರೆ ಮಾಡಿಕೊಡ್ತೀನಿ

